ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಇದರಲ್ಲಿ ಕೆಲಸಗಾರರ ಪೈಕಿ ಎರಡು ವರ್ಗಗಳಿವೆ. ೧) ದಿನಗೂಲಿ ಕೆಲಸಗಾರರು ೨) ಕಾಂಟ್ರ್ಯಾಕ್ಟ್ ಕೆಲಸಗಾರರು. ಈ ಪೈಕಿ ದಿನಗೂಲಿ ಕೆಲಸಗಾರರನ್ನು ಎಷ್ಟು ಮಂದಿ ಖಾಯಂ ಮಾಡಿದ್ದೀರಿ ಮತ್ತು ಕಾಂಟ್ರ್ಯಾಕ್ಟ್ ಕೆಲಸಗಾರರನ್ನು ಎಷ್ಟು ಮಂದಿಯನ್ನು ಖಾಯಂ ಮಾಡಿದ್ದೀರಿ ? ಅಲ್ಲದೇ ನೀವು ಈಗ ಖಾಯಂ ಮಾಡಿರುವವರನ್ನು ಯಾವ ಆಧಾರದ ಮೇಲೆ ಮಾಡಿದಿರಿ ? ೫ ೨ ಅಥವಾ ೩ ವರ್ಷದ ಅವಧಿಯೇ ಎಂಬುದನ್ನು ಖಚಿತವಾಗಿ ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಕೆ. ಎಂ. ಮುನಿಯಪ್ಪ.—ರೇಷ್ಮೆ ಇಲಾಖೆಯಲ್ಲಿ ಎಂಟು ಸಾವಿರ ಜನ ದಿನಗೂಲಿ ನೌಕರರಿದ್ದು ಅದರಲ್ಲಿ ೨೩೨೯ ಮಂದಿಯನ್ನು ನಾವು ಖಾಯಂ ಮಾಡಿದ್ದೇವೆ. ಇದಕ್ಕೆ ಸರ್ಕಾರ ೧೦–೨–೧೯೮೪ ರಲ್ಲಿ ಒಂದು ಆದೇಶ ಹೊರಡಿಸಿ ೫ ವರ್ಷ ಪೂರ್ತಿಯಾದ ನೌಕರರ ಒಂದು ಪಟ್ಟಿಯನ್ನು ತರಿಸಿಕೊಂಡು ಅವರನ್ನು ಖಾಯಂ ಮಾಡಬೇಕೆಂದು ಒಂದು ಆದೇಶ ಕೊಟ್ಟಿದೆ. ಅದರಂತೆ ನಾವು ಮಾಡಿದ್ದೇವೆ. ಇನ್ನು ಕಾಂಟ್ರ್ಯಾಕ್ಟ್ ಬೇಸಿಸ್ ಎಂಬುದು ನಮ್ಮ ಇಲಾಖೆಯಲ್ಲಿ ಇಲ್ಲ. ಆ ಬೇಸಿಸ್ ಮೇಲೆ ಯಾವುದೇ ನೌಕರರನ್ನು ನಾವು ನೇಮಿಸಿಕೊಂಡಿಲ್ಲ. ನೇಮಿಸಿಕೊಳ್ಳುವಾಗ ದಿನಗೂಲಿ ನೌಕರರು ಎಂದೇ ನೇಮಿಸಿಕೊಳ್ಳುತ್ತೇವೆ. ೫ ವರ್ಷಗಳ ಸೇವೆ ಸಲ್ಲಿಸಿದ ನಂತರ ಅವರನ್ನು ಖಾಯಂ ಮಾಡುತ್ತೇವೆ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—೫ ವರ್ಷ ೮ ತಿಂಗಳು ಕೆಲಸ ಮಾಡಿದ ಒಬ್ಬ ನೌಕರನನ್ನು ಈಗ್ಗೆ ಒಂದು ತಿಂಗಳ ಹಿಂದೆ ಕೆಲಸದಿಂದ ತೆಗೆದಿದ್ದು ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ ೫ ವರ್ಷಕ್ಕೆ ಮೇಲ್ಪಟ್ಟು ಸೇವೆ ಸಲ್ಲಿಸಿದವರನ್ನು ಖಾಯಂ ಮಾಡಿದ್ದೇವೆಂದು ಹೇಳುವುದೇ ಸಮಂಜಸವಾಗಿ ಕಾಣುತ್ತಿಲ್ಲ. ಕಾಂಟ್ರ್ಯಾಕ್ಟ್ ಬೇಸಿಸ್ ಮೇಲೆ ೬ ವರ್ಷ ಕೆಲಸ ಮಾಡಿದವರನ್ನು ತೆಗೆದು ಹಾಕಿದ ನಿದರ್ಶನಗಳು ಕೂಡ ಈ ಇಲಾಖೆಯಲ್ಲಿ ಇವೆ. ಇದಕ್ಕೆ ತಾವು ಉತ್ತರಿಸಬೇಕು.

ಶ್ರೀ ಕೆ. ಎಂ. ಮುನಿಯಪ್ಪ.—ಈ ಪ್ರಶ್ನೆ ಉದ್ಭವವಾಗುವುದಿಲ್ಲ, ಮಾನ್ಯ ಸದಸ್ಯರು ಮಾಹಿತಿ ಕಳುಹಿಸಿಕೊಟ್ಟರೆ ಅದನ್ನು ಪರಿಶೀಲಿಸುತ್ತೇನೆ.

೧೯೮೭–೮೮ರಲ್ಲಿ ಕೆ.ಇ.ಬಿ.ಗೆ ಬಿಡುಗಡೆ ಮಾಡಿದ ಹಣ

೨೧೮೮. ಬಿ. ಎಸ್. ಯಡಿಯೂರಪ್ಪ (ಶಿಕಾರಿ ಪುರ).—ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭–೮೮ರ ಆಯವ್ಯಯದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಇಲಾಖೆ ಯೋಜನಾ ಹಾಗೂ ಯೋಜನೇತರ ಯೋಜನೆಗಳಿಗೆ ಸರ್ಕಾರದವರು ಮಂಜೂರು ಮಾಡಿರುವ ಒಟ್ಟು ಹಣವೆಷ್ಟು ?

ಆ) ಆ ಪೈಕಿ ಡಿಸೆಂಬರ್ ೧೯೮೭ರ ಅಂತ್ಯದವರೆಗೆ ಬಿಡುಗಡೆ ಮಾಡಿರುವ ಹಣವೆಷ್ಟು ?

ಇ) ಹಾಗಿದ್ದಲ್ಲಿ ಕಳೆದ ೩ ವರ್ಷದಿಂದ ಸಬ್ಸಿಡಿ ರೂಪದಲ್ಲಿ ಕೊಡಬೇಕಾದ ಹಣವೆಷ್ಟು ಹಾಗೂ ಕೊಟ್ಟಿರುವ ಹಣವೆಷ್ಟು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ರಾಜ್ಯ ಸರ್ಕಾರದ ೧೯೮೭–೮೮ರ ಆಯವ್ಯಯದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಯೋಜನೆಗಳಿಗೆ ೮೭.೬೧ ಕೋಟಿ ರೂ ಗಳು ಸಾಲ ಒದಗಿಸಲ್ಪಟ್ಟಿದೆ. ವಿದ್ಯುತ್‌ಚ್ಛಕ್ತಿ ಮಂಡಳಿಯ ಯೋಜನೇತರ ಯೋಜನೆಗಳಿಗೆ ರಾಜ್ಯ ಸರ್ಕಾರವು ತನ್ನ ಆಯವ್ಯಯದಲ್ಲಿ ಹಣ ಒದಗಿಸಿರುವುದಿಲ್ಲ.

ಆ) ಏನೂ ಇಲ್ಲ.

ಇ) ವರ್ಷ	ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಸಬ್ಸಿಡಿ ಒದಗಿಸಿರುವ ಹಣ ರೂ. ಲಕ್ಷ	ಸಬ್ಸಿಡಿ ಕೊಟ್ಟಿರುವ ಹಣ ರೂ. ಲಕ್ಷ
೧೯೮೪-೮೫	೮೭.೦೦	೮೭.೦೦
೧೯೮೫-೮೬	೯೫.೬೬	೯೫.೦೦
೧೯೮೬-೮೭	೯೧.೮೪	೯೧.೮೪
೧೯೮೭-೮೮	೧೨೭.೦೦	ಏನೂ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಈ ವಿದ್ಯುತ್ ಮತ್ತು ನೀರಾವರಿ ಇಲಾಖೆಗಳು ರೈತರ ಜೀವನಾಡಿ ಇದ್ದಂತೆ. ಆದ್ದರಿಂದ ಈ ಇಲಾಖೆಗಳಿಗೆ ಆಯವ್ಯಯದಲ್ಲಿ ಮಂಜೂರು ಮಾಡಿರುವ ಹಣವನ್ನು ಸಕಾಲದಲ್ಲಿ ಬಿಡುಗಡೆ ಮಾಡದಿದ್ದರೆ ಅಲ್ಲಿ ಕೆಲಸ ಸರಿಯಾಗಿ ಆಗುವುದಿಲ್ಲ. ತಾವು ಈ ಸಾಲಿನಲ್ಲಿ ಸಬ್ಸಿಡಿ ಹಣವನ್ನು ಇನ್ನೂ ಬಿಡುಗಡೆ ಮಾಡದಿರುವ ಕಾರಣ ಭಾಗ್ಯಜ್ಯೋತಿ ಯೋಜನೆಯ ಅಡಿಯಲ್ಲಿ ಕೆಲಸಗಳು ನಡೆಯದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಈ ಭಾಗ್ಯಜ್ಯೋತಿ ಯೋಜನೆಯ ಅಡಿಯಲ್ಲಿ ಕಳೆದ ವರ್ಷ ೫೦ ಸಂಸಾರಗಳಿಗೆ ಅನುಕೂಲವಾಗಿದ್ದರೆ ಈ ಸಾಲಿನಲ್ಲಿ ಇದು ಕೇವಲ ೨೫ ಸಾವಿರ ಸಂಸಾರಗಳಿಗೆ ಇಳಿದಿರುವುದು ನಿಜವಲ್ಲವೇ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಈ ಸಬ್ಸಿಡಿ ಹಣವನ್ನು ಈ ಹಿಂದಿನ ವರ್ಷ ಮಾರ್ಚ್ ತಿಂಗಳ ಕೊನೆಯಲ್ಲಿ ಕೊಟ್ಟಿರುವುದು. ಈ ಸಲವೂ ಸಹ ಅದೇರೀತಿ ಕೊಡುತ್ತೇವೆ. ಭಾಗ್ಯಜ್ಯೋತಿ ಯೋಜನೆಯ ಕೆಲಸ ಮತ್ತು ಇತರೇ ಕೆಲಸಗಳು ಈಗಲೂ ನಡೆಯುತ್ತಿವೆ. ಯಾವ ಕೆಲಸಗಳೂ ಸಹ ನಿಂತಿಲ್ಲ. ನಮ್ಮ ಆಯವ್ಯಯದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಗೆ ಸಬ್ಸಿಡಿ ರೂಪದಲ್ಲಿ ಈ ಸಾಲಿನಲ್ಲಿ ಒದಗಿಸಬೇಕಾದ ೧೨೭.೦೦ ಲಕ್ಷ ರೂಪಾಯಿಗಳನ್ನು ನಾವು ಒದಗಿಸುತ್ತೇವೆ. ಈ ಹಣವನ್ನು ನಾವು ಕಡಿಮೆ ಮಾಡುವುದಿಲ್ಲ.

ಶ್ರೀ ಬಿ. ಎಸ್, ಯಡಿಯೂರಪ್ಪ.—ಈ ಸಲದ ರಾಜ್ಯಪಾಲರ ಭಾಷಣದಲ್ಲಿ ಗ್ರಾಮಾಂತರ ಪ್ರದೇಶಗಳ ವಿದ್ಯುದ್ದೀಕರಣಕ್ಕೆ ಮತ್ತು ಭಾಗ್ಯಜ್ಯೋತಿ ಯೋಜನೆಗೆ ಹೆಚ್ಚಿನ ಗಮನ ಕೊಡಲಾಗುವುದೆಂದು ಹೇಳಿದ್ದರೂ ಸಹ ಭಾಗ್ಯಜ್ಯೋತಿ ಯೋಜನೆಯ ಅಡಿಯಲ್ಲಿ ಕಳೆದ ವರ್ಷ ೫೦ ಸಾವಿರ ಸಂಸಾರಗಳಿಗೆ ವಿದ್ಯುತ್ ಸೌಲಭ್ಯ ಒದಗಿಸಿದ್ದರೆ ಈ ಸಲ ೨೫ ಸಾವಿರ ಸಂಸಾರಗಳಿಗೆ ಮಾತ್ರ ವಿದ್ಯುತ್ ಸೌಲಭ್ಯ ಒದಗಿಸಲು ಕಾರಣವೇನು ? ಈ ರೀತಿ ಮಾಡಿದರೆ ಇದು ನಿಮ್ಮ ಉದ್ದೇಶಕ್ಕೆ ವಿರುದ್ಧವಾಗುವುದಿಲ್ಲವೇ ? ನೀವು ವಿದ್ಯುತ್ ಮಂಡಲಿಗೆ ಸಾಲ ಮತ್ತು ಸಬ್ಸಿಡಿಯನ್ನು ಒದಗಿಸದಿದ್ದರೆ ಅವರು ಯಾವ ರೀತಿ ಕೆಲಸ ಮಾಡುತ್ತಾರೆ ? ಸಾಲ ಮತ್ತು ಸಬ್ಸಿಡಿ ಹಣವನ್ನು ನೀವು ಯಾವಾಗ ಬಿಡುಗಡೆ ಮಾಡುತ್ತೀರಿ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಭಾಗ್ಯಜ್ಯೋತಿ ಯೋಜನೆಯ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿರುವುದು ನಿಜ. ಇದರ ಬಗ್ಗೆ ಈಗ ನನ್ನ ಹತ್ತಿರ ಮಾಹಿತಿ ಇಲ್ಲ. ಈ ಯೋಜನೆಗೆ ಸಂಬಂಧಪಟ್ಟಂತೆ ನಾವು ಹಣ ಕೊಡುವುದನ್ನು ಕಡಿಮೆ ಮಾಡಿಲ್ಲ ಅಥವಾ ನಿಲ್ಲಿಸಿಲ್ಲ. ನಾವು ವಿದ್ಯುತ್ ಮಂಡಲಿಗೆ ಈ ಸಾಲಿನಲ್ಲಿ ಸಬ್ಸಿಡಿ ಹಣ ಇನ್ನೂ ಕೊಡದಿದ್ದರೂ ಸಹ ಅಲ್ಲಿ ಕೆಲಸಗಳು ಮಾತ್ರ ನಡೆಯುತ್ತಿವೆ. ಬಡವರಿಗೆ ಅನುಕೂಲವಾಗಲಿ ಎಂದು ಈ ಯೋಜನೆಯನ್ನು ಚಾರಿಗೆ ತಂದಿರುವುದು. ವಿದ್ಯುತ್ ಸರಬರಾಜಿನ ಇಂಪ್ರೂವ್‌ಮೆಂಟ್‌ಗಾಗಿ ನಾವು ೫೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಇಲ್ಲಿ ನನ್ನ ನೇರವಾದ ಪ್ರಶ್ನೆ ಇಷ್ಟೆ, ವಿದ್ಯುತ್ ಮಂಡಲಿಯ ಯೋಜನೆಗಳಿಗೆ ೮೭ ಕೋಟಿ ರೂಪಾಯಿಗಳ ಸಾಲವನ್ನು ಒದಗಿಸಲ್ಪಟ್ಟಿದೆ ಎಂದು ಹೇಳಿದ್ದೀರಿ. ಅದೇರೀತಿ ಈ ಸಾಲಿನಲ್ಲಿ ೧೨೭.೦೦ ಲಕ್ಷ ರೂಪಾಯಿಗಳ ಸಬ್ಸಿಡಿ ಹಣವನ್ನು ಒದಗಿಸಲಾಗುವುದೆಂದು ಹೇಳಿದ್ದೀರಿ. ಆದರೆ ಜನವರಿ ಮೊದಲನೆಯ ವಾರದವರೆವಿಗೂ ಸಹ ನೀವು ಹಣವನ್ನು ಒದಗಿಸಿಲ್ಲ. ಇದಕ್ಕೆ ಕಾರಣವೇನು ? ನೀವು ಹಣ ಒದಗಿಸದಿರುವ ಕಾರಣ ಭಾಗ್ಯಜ್ಯೋತಿ ಯೋಜನೆಯ ಕೆಲಸ ಕಳೆದ

ವರ್ಷಕ್ಕಿಂತ ಅರ್ಧ ಭಾಗದಷ್ಟು ಕಡಿಮೆ ಆಗಿರುವುದು ನಿಜವಲ್ಲವೇ ? ಮುಂಖ್ಯವಾಗಿ ಹಣವನ್ನು ಬಿಡುಗಡೆ ಮಾಡುತ್ತೀರಿ ಎಂಬುದನ್ನು ಯಾವಾಗ ತಿಳಿಸಬೇಕು ?

ಅಧ್ಯಕ್ಷರು.—ನೀವು ಇದಕ್ಕೆ ಡಿಫನೆಟ್ ಆಗಿ ಉತ್ತರ ಹೇಳಿ?

ಶ್ರೀ ಲಕ್ಷ್ಮೀನರಸಿಂಹಯ್ಯ.— ೨೫ ಸಾವಿರಕ್ಕೆ ನಿಗದಿ ಎಂದು ಇಲ್ಲ, ಅದಕ್ಕಿಂತ ಜಾಸ್ತಿ ಮಾಡುವುದಕ್ಕೆ ಏನು ಕ್ರಮ ಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ನಮ್ಮ ಕಾರ್ಯಕ್ರಮದ ಪ್ರಕಾರ ಇನ್ನೂ ಹೆಚ್ಚಿಗೆ ಕೊಡಬೇಕು. ಇನ್ನೂ ಹೆಚ್ಚಿಗೆ ಮಾಡುವುದಕ್ಕೆ ವ್ಯವಸ್ಥೆ ಮಾಡೋಣ. ೧೯೮೫–೮೬ರಲ್ಲಿ ೬೦,೨೨ ಕೋಟಿ ಕೊಟ್ಟಿದ್ದೇವೆ, ೧೯೮೬–೮೭ರಲ್ಲಿ ೧೦೮ ಕೋಟಿ ಕೊಟ್ಟಿದ್ದೇವೆ. ೧೯೮೭–೮೮ರಲ್ಲಿ ಇನ್ನೂ ಬಿಡುಗಡೆಯಾಗಿಲ್ಲದೇ ಇದ್ದರೂ ಸಹ ಮುಂಡಲಿಯ ಕೆಲಸ ನಮ್ಮ ಯೋಜನೆ ಪ್ರಕಾರ ನಡೆಯುತ್ತಿದೆ, ಕಡಿಮೆಯಾಗಿಲ್ಲ. ಮುಖ್ಯವಾಗಿ ಪಂಪ್ಸೆಟ್ಟುಗಳಿಗೆ ಕನೆಕ್ಷನ್ ಕೊಡುವುದರಲ್ಲಿ ೧೦೦–೧೨೦ ಪರ್ಸೆಂಟ್ ಅಚೀವ್ ಮಾಡಿದ್ದೇವೆ. ಕೆಲಸಕ್ಕೆ ತೊಂದರೆಯಿಲ್ಲ. ಟಾರ್ಗೆಟ್‌ಗಿಂತ ಹೆಚ್ಚಿಗೆ ಮಾಡುತ್ತಾ ಇದ್ದೇವೆ ಎಂದು ಹೇಳಬಯಸುತ್ತೇನೆ.

ಅಧ್ಯಕ್ಷರು.— ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).— ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಒಂದನೆಯ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.— ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಒಂದನೇ ಪಟ್ಟಿಯನ್ನು ಸಭೆಯ ಮುಂದಿಡಲಾಯಿತು.

ರಾಜ್ಯದಿಂದ ಪರದೇಶಕ್ಕೆ ಕಲ್ಲಂ ರಫ್ತಾಗುತ್ತಿರುವ ಬಗ್ಗೆ

೨೧೩. ಶ್ರೀ ಗೋಪಾಲ ಮುಂಕುಂದ ಕಾನಡೆ (ಸಿರ್ಸಿ).— ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಿಟ್ಟು ಉತ್ತರಿಸುವರೇ?

ಅ) ರಾಜ್ಯದಿಂದ ಪರದೇಶಕ್ಕೆ ಕಲ್ಲು ರಫ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಯಾವ ಕಂಪನಿಯ ಮುಖಾಲಕ ಕಲ್ಲು ರಫ್ತಾಗುತ್ತಿದೆ, ಹೆಸರು ಮತ್ತು ವಿಳಾಸ ಒದಗಿಸುವುದು.

ಆ) ಈ ಕಂಪನಿಗಳಿಂದ ಸರ್ಕಾರಕ್ಕೆ ಬರುವ ವಾರ್ಷಿಕ ಆದಾಯವೆಷ್ಟು?

ಶ್ರೀ ರಮೇಶ್, ಸಿ. ಜಿಗಜಿಣಗಿ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು).—

ಅ) ಹೌದು, ಪಟ್ಟಿ ಲಗತ್ತಿಸಿದೆ.

ಆ) ವಾರ್ಷಿಕ ಆದಾಯ, ರೂ. ೩೧,೩೩,೦೦೦

ವೆ.—

೧. ಪೃಥ್ವಿ, ಗ್ರಾನೈಟ್ ಎಕ್ಸ್‌ಪೋರ್ಟ್ಸ್ ಪ್ರೈ ಲಿ., ಇಂಡಸ್ಟ್ರೀಯಲ್ ಸಬರಬ್, ಬೆಂಗಳೂರು–೨೨	ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾ ಬೆಂಗಳೂರು
೨. ಮೈಸೂರು ಮಿನರಲ್ಸ್ ಲಿ., ನಂ. ೩೯, ಎಂ.ಜಿ. ರಸ್ತೆ, ಬೆಂಗಳೂರು – ೧	ಹಾಸನ
೩. ಪಾರ್‌ಮೊಸ್ಟ್ ಗ್ರಾನೈಟ್ಸ್ ಎಕ್ಸ್‌ಪೋರ್ಟ್ ಪ್ರೈ ಲಿ., ನಂ. ೨೩ ಗೋಪಿ ನಿವಾಸ ರಿಚ್‌ಮಂಡ್ ರೋಡ್, ಬೆಂಗಳೂರು	ಆನೇಕಲ್ ತಾಲ್ಲೂಕು ಬೆಂಗಳೂರು ಜಿಲ್ಲೆ